ವಿಷಯ : ರಾಯಚೂರು ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ

1478 (2000)-ಶ್ರೀ ಕೆ. ವಿರುಪಾಕ್ಷಪ್ಪ (ಸಿಂಧನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲಾದ ಗಂಗಾ ಕಲ್ಯಾಣ ಯೋಜನೆಯ ಸಂಖ್ಯೆ ಎಷ್ಟು (ವಾರ್ಷಿಕವಾರು ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು.)

ಆ) ಅನುಷ್ಠಾನಗೊಳಿಸಿದ ಏಜೆನ್ಸಿ ಯಾವುದು. ಪೂರ್ತಿಗೊಳಿಸಲಾದ ಸಂಖ್ಯೆ ಪ್ರಗತಿಯಲ್ಲಿರುವ ಸಂಖ್ಯೆ ಎಷ್ಟು?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ : ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ 14 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ವಾರ್ಷಿಕವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) "ಪ್ರೇರಣಾ" ಎಂಬ ಸ್ವಯಂ ಸೇವಾ ಸಂಸ್ಥೆಯ ವತಿಯಿಂದ ಅನುಷ್ಠಾನಗೊಳಿಸಲಾಗಿದೆ. 14 ಯೋಜನೆಗಳನ್ನು ಪೂರ್ತಿಗೊಳಿಸಲಾಗಿದೆ. 3 ಯೋಜನೆಗಳು ಪ್ರಗತಿಯಲ್ಲಿವೆ.

ವಾರ್ಷಿಕವಾರು ಮತ್ತು ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವರ್ಷ	ತಾಲ್ಲೂಕು	ಘಟಕ	ಫಲಾನುಭವಿಗಳ ಸಂಖ್ಯೆ	ನೀರಾವರಿಗೆ ಒಳಪಟ್ಟ	ವೆಚ್ಚ ಮಾಡಿದ ಹಣ
						(ರೂ. ಲಕ್ಷಗಳಲ್ಲಿ)
1.	1996-97	ರಾಯಚೂರು	1	02	9.32	0.46
2.	1996-97	ದೇವದುರ್ಗ	13	41	154.13	8.21
		ಒಟ್ಟು	**14**	**43**	**163.45**	**8.67**

ವಿಷಯ : ಉ. ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆ.

1479(1999)-ಶ್ರೀ ವಿಶ್ವೇಶ್ವರ ಹೆಗ್ಗಡೆ (ಅಂಕೋಲಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ. ಉತ್ತರ ಕನ್ನಡ ಯಲ್ಲಾಪುರ ಮತ್ತು ಅಂಕೋಲಾ ಪಟ್ಟಣಕ್ಕೆ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಸ್ಥಳಗಳೆಷ್ಟು?

ಆ. ಕುಡಿಯುವ ನೀರಿನ ತೊಂದರೆ ನಿವಾರಣೆ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ? ಇದಕ್ಕಾಗಿ ಬಿಡುಗಡೆಯಾದ ಹಣ ಎಷ್ಟು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಯಲ್ಲಾಪುರದಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಸ್ಥಳಗಳು : ಜಡ್ಡಿ ಪ್ರದೇಶ, ಕಾಳಮ್ಮನಗರ, ಶಾರದಾಗಲ್ಲಿ ಸ್ವಾಗತ ಹೋಟೆಲ್ ಏರಿಯಾ, ಇಸ್ಲಾಂ ಮೊಹಲ್ಲಾ, ಉದ್ಯಮನಗರ, ಆಶ್ರಯ ಕಾಲೋನಿ ಮತ್ತು ವೆಲಿಷ್‌ಗಲ್ಲಿ.

(ಅಂಕೋಲಾದಲ್ಲಿ ಸಾಧಾರಣವಾಗಿ ನೀರಿನ ಸಮಸ್ಯೆ ಇದೆ.)

ಆ) 1. ಯಲ್ಲಾಪುರ ಪಟ್ಟಣಕ್ಕೆ ಜಿಲ್ಲಾ ಪರಿಷತ್ ರೂ. 580.50 ಲಕ್ಷಗಳಿಗೆ, ಗಂಗಾವಳಿ ನದಿಯನ್ನು ಮೂಲವಾಗಿಟ್ಟು ಕೊಂಡು ಅಂದಾಜನ್ನು ತಯಾರಿಸಿದೆ. ಈ ಅಂದಾಜನ್ನು ಪ್ರಸಕ್ತ ದರಪಟ್ಟಿಗೆ ಪರಿಷ್ಕರಿಸಿ ಅನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.